INDIAN JOURNAL OF HISTORY AND ARCHAEOLOGY
ISSN (e):2582-225X
Vol-4, Issue -3, September-October, 2022,
Page No,01 - 07
Peer Reviewed Journal, Referred Journal

# ಮೈಸೂರು ಒಡೆಯರ ಕಾಲಕ್ಕೆ ಬೆಟ್ಟದಪುರ ಸಾಂಸ್ಕೃತಿಕ ಕೊಡುಗೆಗಳು

ಶಿವರಾಜು.[1]

ಪಿರಿಯಾಪಟ್ಟಣ ತಾಲ್ಲೂಕಿಗೆ ಕಳಶ ಪ್ರಾಯವಾದ ಪ್ರಾಚೀನ ಊರೆ ಬೆಟ್ಟದಪುರ. ಇದು ಪಿರಿಯಾಪಟ್ಟಣ ತಾಲ್ಲೂಕಿನಿಂದ ಸರಿಸುಮಾರು 15 ಕಿಲೋಮೀಟರ್ ದೂರದಲ್ಲಿರುವ ಒಂದು ಪ್ರಸಿದ್ಧವಾದ ಧಾರ್ಮಿಕ ಹಾಗೂ ಪ್ರೇಕ್ಷಣೀಯ ಸ್ಥಳವೂ ಸಹ ಆಗಿದೆ. ಪಿರಿಯಾಪಟ್ಟಣ ತಾಲ್ಲೂಕು ಕೃಷ್ಣರಾಜನಗರ, ಮಡಿಕೇರಿ, ಪಿರಿಯಾಪಟ್ಟಣ, ಅರಕಲಗೂಡು ರಸ್ತೆಗಳು ಕೂಡುವ ಒಂದು ನೆಲೆಯಾಗಿರುತ್ತದೆ. ಹಾಗೆಯೇ, ಇದೊಂದು ಹೋಬಳಿ ಕೇಂದ್ರವೂ ಕೂಡ ಆಗಿದೆ.[1] ಬೆಟ್ಟದಪುರಕ್ಕೆ ಸಂಬಂಧಿಸಿದಂತೆ ಸುಮಾರು ಕ್ರಿ.ಶ. 15ನೇ ಶತಮಾನದಿಂದ 19ನೇ ಶತಮಾನದವರೆವಿಗೂ ರಚಿಸಲಾಗಿರುವ ಸರಿಸುಮಾರು ಮೂವತ್ತಕ್ಕೂ ಹೆಚ್ಚು ಶಾಸನಗಳು ವರದಿಯಾಗಿವೆ.[2] ಕ್ರಿ.ಶ. ಸುಮಾರು 1399ರಲ್ಲಿ ಯದುರಾಯರು ಮೈಸೂರು ಸೀಮೆಯ ಒಡೆಯರಾದರು. ಅವರು ಕ್ರಿ.ಶ. 1565ರವರೆಗೂ ವಿಜಯನಗರ ಅರಸರ ನೆಚ್ಚಿನ ಮಂಡಲೀಕರಾಗಿ ಕಾರ್ಯನಿರ್ವಹಿಸಿದ್ದರು. ಈ ಕಾಲ ಅವಧಿಯಲ್ಲಿ ಮೈಸೂರು ಪ್ರದೇಶದಲ್ಲಿ ಹಲವು ವಿಶಿಷ್ಟ ಆಡಳಿತ ಘಟಕಗಳು ಅಸ್ತಿತ್ವವನ್ನು ಪಡೆದಿದ್ದವು. ಅವುಗಳಲ್ಲಿ ಪಟ್ಟಣ, ಅಷ್ಟಗ್ರಾಮ ಸೀಮೆ ಮತ್ತು ಮೈಸೂರು ಅಷ್ಟಗ್ರಾಮ ಸೀಮೆಗಳು ಗಮನವನ್ನು ಹೆಚ್ಚು ಸೆಳೆಯುತ್ತವೆ. ಈ ಅವಧಿಯಲ್ಲಿ ಅನೇಕ ನಾಡುಗಳೊಂದಿಗೆ ಸೀಮೆಗಳು ತಲೆಯೆತ್ತಿದವು. ಅವುಗಳೇ ಅರಕಲಗೂಡು ಸೀಮೆ (ಪಿರಿಯಾಪಟ್ಟಣ 70) ಒಂದು ಪ್ರಮುಖ ನಾಡಾಗಿತ್ತು. ಆ ನಾಡಿನ ಒಂದು ಊರು/ ಗ್ರಾಮಗಳ ಸಮೂಹವನ್ನು ನಿರ್ದೇಶಿಸುತ್ತಿಲ್ಲವೆಂದು ಭಾವಿಸಬೇಕಾಗಿದೆ. ಉಳಿದ ಸ್ಥಳಗಳಲ್ಲಿ ಹಲವು ಗ್ರಾಮಗಳು ಇರುತ್ತಿದ್ದವಷ್ಟೆ. ಉಕ್ತವಾಗಿರುವ ಹಲವಾರು ಗ್ರಾಮಗಳು ಇಂದಿಗೂ ಗಮನಾರ್ಹವಾಗಿವೆ. ಮತ್ತೇ ಬಹುಮುಖ್ಯ ಸ್ಥಳಗಳಾಗಿ ಇಲ್ಲವೇ ಹೋಬಳಿ ಕೇಂದ್ರಗಳಾಗಿ ಮುಂದುವರೆದಿರುವುದನ್ನು ಇಂದಿಗೂ ಕೂಡ ಕಾಣಬಹುದಾಗಿದೆ.

ಕ್ರಿ.ಶ. 1565ರಲ್ಲಿ ನಡೆದ ರಕ್ಕಸಗಿ – ತಂಗಡಗಿ ಯುದ್ಧದ ಅನಂತರದಲ್ಲಿ ವಿಜಯನಗರ ಸಾಮ್ರಾಜ್ಯದ ಆಡಳಿತವು ಅರವೀಡು ವಂಶೀಯರ ಆಳ್ವಿಕೆಗೆ ಒಳಪಟ್ಟಿತು. ಆವಾಗ ವಿಜಯನಗರದ ಸಾಮಂತ ಮಾಂಡಲೀಕರಾಗಿದ್ದ ಅನೇಕರು ಸ್ವತಂತ್ರರಾದರು. ಅಂತಹವರಲ್ಲಿ ಮೈಸೂರಿನ ಅರಸರೂ

[1]. ಸಂಶೋಧಕರು, ಇತಿಹಾಸ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು–06

ಕೂಡ ಸೇರಿದಂತೆಯೇ ಚನ್ನಪಟ್ಟಣದ ಜಗದೇವರಾಯ, ಪದಿನಾಡಿನ ದೊರೆಗಳು ಮೂಗೂರು ಮತ್ತು ಉಮ್ಮತ್ತೂರು ಪಾಳೆಗಾರರು, ತೆರಕಣಾಂಬಿಯ ಪ್ರಭುಗಳು ಮುಂತಾದವರು ಈ ಮೈಸೂರು ಪ್ರದೇಶದಲ್ಲಿ ಪ್ರಮುಖರಾಗಿದ್ದರು. ಈಗಲೂ ಅನೇಕ ಸ್ಥಳಗಳು ನಂಜರಾಯ ಪಟ್ಟಣದ ಸೀಮೆ, ಮಳಲವಾಡಿಯ ಸೀಮೆ ಮೂಗೂರು ಸೀಮೆ, ಹೆಂಮುಗೆರೆಯ ಸೀಮೆ, ಕಣಲನಾಡು, ಕಾರೆನಾಡು (ಕುಮಾರನಾಡು) ತಾಯೂರುನಾಡು, ಹದಿನಾಲ್ಕುನಾಡು, ಹೊತ್ತುಗನಾಡು, ಹದನಾಡು, ಬಡಗನಾಡು, ಮಹಿಶೂರ ನಗರದ ಹೋಬಳಿ ವಿಚಾರಚಾವಡಿ ವಳಿತ, ಉಮ್ಮತ್ತೂರು ಚಾವಡಿ, ಮೈಸೂರು ವಳಿತ, ತಾಯೂರ ಸ್ಥಳ, ತುಂಗದ ಸ್ಥಳ, ಬಳಸೋಗೆಯ ಸ್ಥಳ, ರಾವುಂದರ ಸ್ಥಳ, ಹೆಮ್ಮನಹಳ್ಳಿ ಸ್ಥಳ, ನಂಜರಾಯಪಟ್ಟಣ ಬಯನಾಡ ಪಟ್ಟಣ, ಪಿರಿಯಾಪಟ್ಟಣ ಸ್ಥಳ, ಪಿರಿಯಾಪಟ್ಟಣ ಹೀಗೆ ಶಾಸನೋಕ್ತವಾಗಿದೆ. ಹೀಗೆ ಮೈಸೂರು ಪ್ರದೇಶದಲ್ಲಿ ಪ್ರಾಚೀನ ಕಾಲದಿಂದ ಮೈಸೂರು ಅರಸರ ಕಾಲದವರೆಗೂ ವಿಭಿನ್ನ ಆಡಳಿತಾತ್ಮಕ ಘಟಕಗಳು ಕಾಲಕಾಲಕ್ಕೆ ರೂಪುಗೊಂಡು ಆಯಾ ರಾಜರ ಕಾಲದಲ್ಲಿ ತಮ್ಮ ಅಸ್ತಿತ್ವದ ಮೂಲಕ ಆಯಾ ಪ್ರದೇಶದ ಆಡಳಿತ ಮತ್ತು ಸಂಸ್ಕೃತಿಯನ್ನು ರೂಪಿಸುವಲ್ಲಿ ಸಹಕರಿಸಿದ್ದಾರೆ ಎಂದು ತಿಳಿಯಬಹುದಾಗಿದೆ.[3]

ಪಿರಿಯಾಪಟ್ಟಣದ ಚೆನ್ನಿಗರಾಯ ದೇವಸ್ಥಾನದ ಕ್ರಿ.ಶ.1590ರ ಕಾಲದ ಶಾಸನವು ಶ್ರೀಕಂಠರಾಜಯ್ಯ ಅವರ ಕುಮರ ಮಾಂಡಳೀಕ ಮಂಡಲೇಶ್ವರ ಕುಲೋತ್ತುಂಗ ಚಂಗಾಳ್ವ ಶ್ರೀಪಿರಿಯಾರಾಜಯ್ಯದೇವ ಮಹಾ ಅರಸು ಈ ಪಟ್ಟಣವನ್ನು ಜೀರ್ಣೋದ್ಧಾರ ಮಾಡಿ ತಮ್ಮ ಹೆಸರಿನಲ್ಲಿ ಪಿರಿಯರಾಜಪಟ್ಟಣವೆಂದು ಹೆಸರು ಕೊಟ್ಟು ಇಂದಿನಿಂದ ನಮ್ಮ ರಾಜ್ಯದ ದೊರೆಯಾಗಲಿ ಪಕ್ಕದ ರಾಜ್ಯದ ದೊರೆಯಾಗಲಿ 18 ಜಾತಿ, 101 ಕುಲದವರೂ ಈ ಶಾಸನದಲ್ಲಿ ಸಿಂಗಪಟ್ಟಣವನ್ನು ಪಿರಿಯಾರಾಜಪಟ್ಟಣವೆಂಬ ಹೆಸರಿನಿಂದ ಕರೆಯುವಂತೆ ತಿಳಿಸಲಾಗಿದೆ.[4]

ಬೆಟ್ಟದಪುರದಲ್ಲಿ ಶ್ರೀಶಿಡ್ಲು ಮಲ್ಲಿಕಾರ್ಜುನ ದೇವಸ್ಥಾನವಿದೆ. ಈ ದೇವಾಲಯದ ತಳ ವಿನ್ಯಾಸವು ಗರ್ಭಗುಡಿ, ಸುಕನಾಸಿ, ನವರಂಗ, ಮುಖಮಂಟಪಗಳನ್ನು ಒಳಗೊಂಡಿದೆ. ಮೂಲ ಗರ್ಭಗೃಹ 10*10 ಅಡಿ ಚದರ ಸುತ್ತಳತೆಯನ್ನು ಒಳಗೊಂಡಿದೆ. ಗರ್ಭಗೃಹದ ನಾಲ್ಕು ಮೂಲೆಯಲ್ಲಿಯೂ ಗೋಡೆಗೆ ಸೇರಿದಂತೆ ಮೂಲೆ ಕಂಬಗಳಿವೆ. ಗರ್ಭಗೃಹದ ಮಧ್ಯದಲ್ಲಿ ಮಲ್ಲಿಕಾರ್ಜುನಸ್ವಾಮಿಯ ಹೆಸರಿನ ಶಿವಲಿಂಗವಿದ್ದು, ಎದುರು ಆತನ ವಾಹನವಾದ ನಂದಿ ಶಿಲ್ಪವಿದೆ. ಅಲ್ಲದೆ ಪಾರ್ವತಿದೇವಿ, ನಟರಾಜ ಇನ್ನೂ ಮೊದಲಾದ ಸಣ್ಣ ವಿಗ್ರಹಗಳಿವೆ. ಗರ್ಭಗೃಹದ ದ್ವಾರದ ಮೇಲ್ಭಾಗದ ಲಲಾಟಬಿಂಬದಲ್ಲಿ ನಂದಿಯ (ಬಸವ) ಉಬ್ಬುಶಿಲ್ಪವಿದೆ. ಆದರೆ ಸುಕನಾಸಿಯ ಅಂಕಣದಲ್ಲಿ ಯಾವುದೇ ತರಹದ ಶಿಲ್ಪಗಳು ಕಂಡುಬರುವುದಿಲ್ಲ. ಶುಕನಾಸಿಯ ಭಾಗವು ವಿಶಾಲವಾಗಿದ್ದು, ಸುಮಾರು 25*25 ಅಡಿ ಚದರ ಸುತ್ತಳತೆಯನ್ನು ಹೊಂದಿದೆ. ಈ ಭಾಗದಲ್ಲಿ ಆರು ಕಂಬಗಳಿವೆ. ಇದನ್ನು ನಾವು ಮೈಸೂರಿನ ಒಡೆಯರ ಕಾಲಕ್ಕೆ ಸೇರಿಸಬಹುದಾಗಿದೆ.

ನವರಂಗದ ಭಾಗದಲ್ಲಿ ದಕ್ಷಿಣಾಭಿಮುಖವಾಗಿ ಪ್ರವೇಶದ್ವಾರವನ್ನು ನಿರ್ಮಿಸಲಾಗಿದೆ. ನವರಂಗದ ಅಂಕಣದಲ್ಲಿ ಸರಿಸುಮಾರು 16 ಕಂಬಗಳಿವೆ. ಈ ಕಂಬಗಳ ಎತ್ತರ 15 ಅಡಿ, ನವರಂಗದ ಮಧ್ಯದಲ್ಲಿ 3+3 ಒಟ್ಟು 6 ಕಂಬಗಳಿವೆ. ಹೊಸ್ತಿಲ ಎತ್ತರ ಸುಮಾರು 15 ಅಡಿ, ಈ ಹೊಸ್ತಿಲ ಮೇಲ್ಭಾಗದಲ್ಲಿ ನಂದಿಯ ಉಬ್ಬುಶಿಲ್ಪವಿದೆ. ಮುಖಮಂಟಪದಲ್ಲಿ 4*4=8 ಕಂಬಗಳಿವೆ. ಇವುಗಳು ಸಹ ಮೈಸೂರು ಒಡೆಯರ ಕಾಲಕ್ಕೆ ಸೇರಿಸಬಹುದಾಗಿದೆ. ದೇವಾಲಯದ ಮೇಲ್ಭಾಗದಲ್ಲಿ ನಾಲ್ಕು ಮೂಲೆಗಳಲ್ಲಿ ನಾಲ್ಕು ನಂದಿ ಗಾರೆಗಚ್ಚಿನ ಶಿಲ್ಪಗಳಿವೆ. ಗರ್ಭಗೃಹದ ಮೇಲ್ಭಾಗದಲ್ಲಿ ವಿಮಾನ (ಗೋಪುರ) ವಿದ್ದು, ಇದು ನಾಲ್ಕು ಅಂತಸ್ತುಗಳನ್ನು ಹೊಂದಿದೆ. ಇದೊಂದು ದ್ರಾವಿಡ ಶೈಲಿಯ ಲಕ್ಷಣವನ್ನು ಹೊಂದಿದೆ. ಗರ್ಭಗೃಹದ ಉತ್ತರ ದಿಕ್ಕಿನ ಹೊರಭಾಗದ ಗೋಡೆಯಲ್ಲಿ ಹನುಮಂತನ ಶಿಲ್ಪಗಳಿವೆ. ಅಲ್ಲದೆ ಒಂದು ಶಿವಲಿಂಗವಿದೆ. ಇದೇ ಅಲ್ಲದೆ ದಕ್ಷಿಣ ದಿಕ್ಕಿಗೂ ಸಹ ಹನುಮಂತ ಮತ್ತು ಕಮಲದ ಕೆತ್ತನೆಗಳಿವೆ.

**ಪವಾಡ ಬಸವೇಶ್ವರ ದೇವಸ್ಥಾನ**

ಈ ದೇವಸ್ಥಾನವು ಶ್ರೀಶಿಡ್ಲುಮಲ್ಲಿಕಾರ್ಜುನಸ್ವಾಮಿ ದೇವಾಲಯದ ಎದುರಿನಲ್ಲಿದೆ. ಈ ದೇವಾಲಯ ಸಹ ದ್ರಾವಿಡ ಶೈಲಿಯ ಏಕಕೂಟ ದೇವಾಲಯವಾಗಿದೆ. ಇದು ಪಶ್ಚಿಮಾಭಿಮುಖವಾಗಿದೆ. ಮೂಲದಲ್ಲಿ ಈ ದೇವಾಲಯವು ಸ್ಥಳೀಯರಾದ ಚಂಗಾಳ್ವರ ಕಾಲದ ವಾಸ್ತುಶೈಲಿಯ ಬೆಳವಣಿಗೆಯನ್ನು ಹೊಂದಿದ್ದರೂ, ತದನಂತರ ಕಾಲದಲ್ಲಿ ಬೆಳವಣಿಗೆಯಾಗಿದೆ. ಮೂಲ ಗರ್ಭಗುಡಿಯಲ್ಲಿ ನಂದಿಯ ಶಿಲ್ಪವಿದೆ. ನವರಂಗದಲ್ಲಿ 6+6=12 ಕಂಬಗಳಿವೆ. ಇಲ್ಲಿರುವ ದ್ವಾರದ ಇಕ್ಕೆಲಗಳ ದ್ವಾರಕಂಬದಲ್ಲಿ ಎರಡು ಕಡೆಗಳಲ್ಲಿಯೂ ದ್ವಾರಪಾಲಕರು ಮತ್ತು ಸಪ್ತಮಾತೃಕೆಯರ ಸಣ್ಣ ಸಣ್ಣ ಶಿಲ್ಪಗಳಿವೆ. ಇಲ್ಲಿರುವ ಕಂಬಗಳು ಚೌಕಾಕಾರವಾಗಿ ಹಾಗೂ 16 ಮುಖಗಳನ್ನು ಹೊಂದಿರುವ ಕಂಬಗಳಾಗಿವೆ. ಪ್ರವೇಶದ್ವಾರದ ದೇವಾಲಯದ ಮೇಲ್ಭಾಗದಲ್ಲಿ ಗಾರೆಗಚ್ಚಿನಿಂದ ಮಾಡಿದ ಒಂದು ಬಹುದೊಡ್ಡದಾದ ಬಸವನ ವಿಗ್ರಹವನ್ನು ಇರಿಸಲಾಗಿದೆ ಅಥವಾ ಸ್ಥಾಪಿಸಲಾಗಿದೆ.[5]

**ರಾಮದೇವಾಲಯ**

ಈ ದೇವಸ್ಥಾನವು ಶ್ರೀಶಿಡ್ಲುಮಲ್ಲಿಕಾರ್ಜುನಸ್ವಾಮಿ ದೇವಾಲಯದ ಹಿಂಭಾಗದಲ್ಲಿದ್ದು, ಇದು ಸಹ ಪೂರ್ವಾಭಿಮುಖವಾಗಿದೆ. ದ್ರಾವಿಡ ಶೈಲಿಯ ಏಕಕೂಟ ದೇವಾಲಯವಾಗಿದೆ. ಮೂಲದಲ್ಲಿ ಇದು ಚಂಗಾಳ್ವರ ವಾಸ್ತುಶೈಲಿಯನ್ನು ಹೊಂದಿದ್ದರೂ, ಇದರ ಜೊತೆಗೆ ಮೈಸೂರು ಒಡೆಯರ ಕಾಲದ ಹಿಂದೂ ಮುಸ್ಲಿಂ ಶೈಲಿಯನ್ನು ಕಾಣಬಹುದಾಗಿದೆ. ಈ ದೇವಾಲಯದ ಸುಕನಾಸಿಯಲ್ಲಿ ಯಾವುದೇ ತರಹದ

ಶಿಲ್ಪಗಳಿಲ್ಲ. ನವರಂಗದಲ್ಲಿ 25*25 ಅಡಿ ಚದರ ಸುತ್ತಳತೆಯನ್ನು ಹೊಂದಿದೆ. ಉತ್ತರಕ್ಕೆ ಹಾಗೂ ದಕ್ಷಿಣ ದಿಕ್ಕಿಗೆ ಎರಡೂ ಕಡೆಗೂ ಎರಡು ಸಾಲು ಕಂಬಗಳಿವೆ. ಒಂದೊಂದು ಸಾಲಿನಲ್ಲಿ ನಾಲ್ಕು ಕಂಬಗಳಂತೆ ಒಟ್ಟು 16 ಕಂಬಗಳಿವೆ. ದೇವಾಲಯದ ಮೇಲ್ಭಾಗದಲ್ಲಿ ಮೈಸೂರು ಒಡೆಯರ ಕಾಲದ ಶೈಲಿಯನ್ನು ಹೊಂದಿರುವಂತಹ ವಿಮಾನ ಅಥವಾ ಗೋಪುರವಿದೆ.[6] ಒಟ್ಟಾರೆ ಮೈಸೂರು ಒಡೆಯರ್ ಅವರು ಧಾರ್ಮಿಕ ಚಟುವಟಿಕೆಗಳಲ್ಲಿಯೂ ಪ್ರಭಾವಿತರಾಗಿದ್ದಾರೆ ಎಂಬುದು ಅವರ ಕೊಡುಗೆಗಳಿಂದ ತಿಳಿದುಬರುತ್ತದೆ.

ಮಾನವನು ತನ್ನ ಜೀವನದಲ್ಲಿ ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ನೀಡುವುದು, ಅರಿಕೆ ಸಲ್ಲಿಸುವುದು ಮುಂತಾದವುಗಳು ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಒಂದು ಪ್ರಕ್ರಿಯೆಯಾಗಿದೆ. ವೇದಗಳ ಕಾಲವನ್ನು ಗಮನಿಸಿದರೆ, ಧಾರ್ಮಿಕ ಕ್ಷೇತ್ರವು ತನ್ನದೇ ಆದ ಬಾಹುಗಳನ್ನು ವಿಸ್ತರಿಸಿಕೊಂಡು ಮಾನವ ಕುಲದ ಪ್ರತಿಯೊಂದು ಸಂಬಂಧಕ್ಕೂ ಧಾರ್ಮಿಕ ಕಟ್ಟುಪಾಡನ್ನು ಬಿಗಿದಿದೆ. ಇದು ಮುಂದುವರೆದು ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ನೀಡುವುದೆಂದರೆ, ಅದೊಂದು ರೀತಿಯ ಪುಣ್ಯ ಕೆಲಸವೆಂಬಂತೆ ಭಾವನೆಗಳಿಗೆ ಒಳಗಾಗುತ್ತಾರೆ. ದೇವಾಲಯಗಳು ಸಹ ಈ ನಿಟ್ಟಿನಲ್ಲಿ ಅತ್ಯಂತ ಭಕ್ತಿಮಯವಾಗಿಯೂ ಆರ್ಥಿಕವಾಗಿಯೂ ಏಳಿಗೆಯನ್ನು ಕಾಣುವುದರೊಂದಿಗೆ ಪ್ರತಿಹಂತದಲ್ಲೂ ತಮ್ಮದೇ ಆದಂತಹ ಛಾಪನ್ನು ಮೂಡಿಸಿದೆ. ಈ ನಿಟ್ಟಿನಲ್ಲಿ ಪಿರಿಯಾಪಟ್ಟಣ ತಾಲ್ಲೂಕಿನ ಬೆಟ್ಟದಪುರವು ಒಂದು ಧಾರ್ಮಿಕ ಕ್ಷೇತ್ರವಾಗಿದ್ದು, ತನ್ನದೇ ಆದ ಇತಿಹಾಸ ಮತ್ತು ಪರಂಪರೆಯನ್ನು ಹೊಂದಿದೆ ಎಂದು ತಿಳಿಯಬಹುದಾಗಿದೆ.

ಐತಿಹಾಸಿಕವಾಗಿ ಈ ಭಾಗದಲ್ಲಿ ಹಲವಾರು ರಾಜಮನೆತನಗಳು ಆಳ್ವಿಕೆಯನ್ನು ಕಂಡು ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಹಾಗೂ ಧಾರ್ಮಿಕವಾಗಿ ಹಲವು ಧರ್ಮಗಳ ಸಾಮರಸ್ಯದ ಬೀಡಾಗಿದೆ. ಹಲವಾರು ರೀತಿಯ ಪೌರಾಣಿಕ ಹಿನ್ನೆಲೆಯನ್ನು ಹೊಂದಿರುವ ಅನೇಕ ನೆಲೆಗಳನ್ನು ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಗುರುತಿಸಬಹುದಾಗಿದೆ.[7] ಪುರಾಣ ಐತಿಹ್ಯಗಳಿಂದ ಕೂಡಿರುವ ಈ ಬೆಟ್ಟದಪುರ, ಇಲ್ಲಿರುವ ದೇವಾಲಯಗಳ ಹಿನ್ನೆಲೆ ಹಾಗೂ ಕಾಲದದೃಷ್ಟಿಯಿಂದ ಅತ್ಯಂತ ಹಿಂದಿನ ಕಾಲಕ್ಕೆ ಹೋಗಬಹುದು. ಆದರೆ ಮೈಸೂರು ಒಡೆಯರ ಕಾಲಕ್ಕೆ ಸಾಕಷ್ಟು ಆಧಾರಗಳಿವೆ. ಇಂತಹ ಪ್ರಸಿದ್ಧ ಧಾರ್ಮಿಕ ಕ್ಷೇತ್ರದಲ್ಲಿ ಜಾತ್ರೆ ರಥೋತ್ಸವಗಳು ಕೂಡ ನಡೆಯುತ್ತವೆ. ಬೆಟ್ಟದಪುರದ ಮಲ್ಲಿಕಾರ್ಜುನಸ್ವಾಮಿ ಜಾತ್ರೆ ಇದು ಪಿರಿಯಾಪಟ್ಟಣ ತಾಲ್ಲೂಕಿನ ಅತಿದೊಡ್ಡ ಜಾತ್ರೆಗಳಲ್ಲಿ ಬೆಟ್ಟದಪುರ ಶಿಡ್ಲು ಮಲ್ಲಿಕಾರ್ಜುನಸ್ವಾಮಿ ಜಾತ್ರೆಯೂ ಕೂಡ ಒಂದು. ಈ ಜಾತ್ರೆಯಲ್ಲಿ ಗಿರಿಜಾ ಕಲ್ಯಾಣ ಮತ್ತು ರಥೋತ್ಸವಗಳು ಅತ್ಯಂತ ವೈಭವದಿಂದ ನೆರವೇರುತ್ತದೆ. ದನಗಳ ಜಾತ್ರೆಯೂ ನಡೆಯುತ್ತದೆ. ಈ

ಜಾತ್ರೆಯೂ ಫೆಬ್ರವರಿ ತಿಂಗಳಲ್ಲಿ 15 ದಿವಸಗಳು ನಡೆಯುತ್ತದೆ. ಈ ಜಾತ್ರೆಗೆ ಲಕ್ಷಾಂತರ ಜನರು ಬಂದು ಸೇರುತ್ತಾರೆ.

ಮೈಸೂರು ಒಡೆಯರ್ ಕಾಲಕ್ಕೆ ಜಾನಪದ ಹಿನ್ನೆಲೆಯು ಬೆಳೆದಿತ್ತು. ಮೈಸೂರು ಒಡೆಯರ್ ಅವರು ಬುಡಕಟ್ಟು ಜನಾಂಗಗಳಿಗೂ ನೆರವಾಗಿದ್ದಾರೆ. ಏಕೆಂದರೆ ಮೈಸೂರು ದಸರಾ ಸಂದರ್ಭದಲ್ಲಿ ಬುಡಕಟ್ಟು ಸೋಲಿಗರ ಕೊಡುಗೆಗಳು ಅಪಾರ. ಈ ಬೆಳವಣಿಗೆಯನ್ನು ಗಮನಿಸಿದರೆ ಜಾನಪದ ತಮಟೆಕುಣಿತ, ರಂಗದಕುಣಿತ, ಜನಪದ ಕಥೆಗಳು, ಕೋಲಾಟ, ಜೋಗಿ ಹಾಡು, ಭಜನೆ, ಜನಪದಗೀತೆ, ಸೋಬಾನೆ ಪದ, ಮಲ್ಲಿಕಾರ್ಜುನನ ಹಾಡು, ಅದರಲ್ಲೂ ಬೆಟ್ಟದಪುರ ಶಿಡ್ಲು ಮಲ್ಲಿಕಾರ್ಜುನಸ್ವಾಮಿಯ ಮಹಿಮೆಯನ್ನು ಕುರಿತು ನೀಲಗಾರ ಶೆಟ್ಟಿಯರಾಜೇಗೌಡರು ಹಾಡುತ್ತಾರೆ. ಪಿರಿಯಾಪಟ್ಟಣ ತಾಲ್ಲೂಕಿನಾದ್ಯಂತ ಮಲ್ಲಯ್ಯನ ಹಾಡುಗಳನ್ನು ಹಾಡುವ ಕಲಾವಿದರಿದ್ದಾರೆ. ಚಿತ್ರರಂಗದ ಹಾಸ್ಯನಟ ಮುಸುರಿ ಕೃಷ್ಣಮೂರ್ತಿ ಅವರು ಕೂಡ ಇದೇ ಬೆಟ್ಟದಪುರದವರು. ಇವರಿಗೂ ಸಹ ಮೈಸೂರು ಸಂಸ್ಥಾನ ಗೌರವ ಸಲ್ಲಿಸಿದೆ.

ಮೈಸೂರು ಒಡೆಯರ ಕಾಲಕ್ಕೆ ಹಿಂದೆ ಗ್ರಾಮಗಳಲ್ಲಿ ಶಾನುಭೋಗ, ಕುಲಕರ್ಣಿ ಅಥವಾ ಪಾಟೀಲರಿಗೆ ಸಹಾಯಕರಾಗಿ ಕೆಲಸ ಮಾಡುತ್ತಿದ್ದ ತಳ್ವರ, ಓಲೇಕಾರ, ತೋಟಿ ಮುಂತಾದ ಹುದ್ದೆಗಳಿಗೆ ಬದಲು ಪ್ರಸ್ತುತಗ್ರಾಮ ಸಹಾಯಕರನ್ನು ನೇಮಿಸಲಾಗಿದೆ. ಮೈಸೂರು ಒಡೆಯರ ಆಡಳಿತದ ಕಾಲಕ್ಕೆ ಬೆಟ್ಟದಪುರವು ಒಂದು ಹೋಬಳಿ ಕೇಂದ್ರವಾಗಿತ್ತು. ಇದು ಸಹ ಅವರ ಕಾಲದ ಕೊಡುಗೆಯಾಗಿದೆ. ಕಂದಾಯ ಆಡಳಿತ ಯಂತ್ರದ ನಿರ್ವಹಣೆಗಾಗಿಯೇ ಹಲವಾರು ಅನುಷ್ಠಾನಕ್ಕಾಗಿ ಭೂಕಂದಾಯ, ಆಸ್ತಿತೆರಿಗೆ, ಪ್ರವೇಶ ಶುಲ್ಕ, ವೃತ್ತಿತೆರಿಗೆ ಮುಂತಾದ ತೆರಿಗೆಗಳನ್ನು ಬಹುಹಿಂದಿನಿಂದಲೂ ವಿಧಿಸಲಾಗುತ್ತಿತ್ತು. ಅದರಲ್ಲೂ ಕೃಷಿ ಪ್ರಧಾನ ಸಮಾಜದಲ್ಲಿ ಭೂಕಂದಾಯವೇ ಸರ್ಕಾರಗಳ ಪ್ರಧಾನ ಆದಾಯದ ಮೂಲವಾಗಿತ್ತು. ಭೂಮಾಪನ ಆಧಾರಿತ ಕಳನಿ ಮತ್ತರು, ನಿವರ್ತನ, ಕಂಬ–ಕುಳಿಗಳೆಂಬ ಭೂಪ್ರಮಾಣ ಬಿತ್ತನೆ ಸಾಮರ್ಥ್ಯವನ್ನು ಆಧರಿಸಿದ ಖಂಡುಗ, ಕೊಳಗ, ಬಳ್ಳ, ವೆಲಿ ಮುಂತಾದ ಭೂಪ್ರಮಾಣಗಳು ಅಸ್ತಿತ್ವದಲ್ಲಿದ್ದು, ಪ್ರಾಕೃತಿಕ ಅಂಶಗಳ ಜೊತೆಗೆ ಅವುಗಳನ್ನು ಆಧರಿಸಿ ಭೂಕಂದಾಯವನ್ನು ನಿರ್ಧರಿಸಿ ಷಡ್ಭಾಗ, ದಶಭಾಗ, ಕುಳಾಯ ಎಂಬ ಹೆಸರಿನಲ್ಲಿ ಅದನ್ನು ಸಂಗ್ರಹಿಸಲಾಗುತ್ತಿತ್ತು. ಭೂ ಆಡಳಿತಕ್ಕೆ ಸಂಬಂಧಿಸಿದಂತೆ ಖಾಸಗಿ ಜಮೀನಿನ ಗಡಿಯನ್ನು ಗ್ರಾಮಗಡಿಯನ್ನು ನಿರ್ಧರಿಸಲು ಪ್ರಾಕೃತಿಕ ಅಂಶಗಳ ಜೊತೆಗೆ ಲಿಂಗಮುದ್ರೆ, ಮುಕ್ಕೊಡೆ, ವಾಮನ ಮುದ್ರೆ, ಕಲ್ಲುಗಳನ್ನು ಗಡಿಕಲ್ಲಾಗಿ ನಿಲ್ಲಿಸಲಾಗುತ್ತಿದ್ದ ಅಂಶ ಪಿರಿಯಾಪಟ್ಟಣ ತಾಲ್ಲೂಕಿನ ವಿವಿಧ ಶಾಸನಗಳಿಂದ ತಿಳಿಯಬಹುದಾಗಿದೆ. ಅದರಲ್ಲಿ ಸುಂಕ, ತೆರೆ (ಮನದೆರೆ, ಹೊಸ್ತಿಲಪಣ) ಮಗ್ಗದೆರೆ, ಮಾರ್ಗಾದಾಯ, ಗಾಣದೆರೆ, ಪಾದದೆರೆ, ಮುಂತಾದ ತೆರಿಗೆಗಳ ಪ್ರಸ್ತಾಪವೂ ಇದೆ. ಶಾಸನಗಳಲ್ಲಿ ಗದ್ದೆ, ಹೊಲ, ತೋಟ ಮುಂತಾದ ಭೂವರ್ಗಗಳ ಉಲ್ಲೇಖಗಳಿವೆ.

ಮೈಸೂರು ಒಡೆಯರ್ ಆಡಳಿತದಲ್ಲಿ ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಆಸ್ಥೆ ನೀಡಲಾಯಿತು. ಈ ಅವಧಿಯಲ್ಲಿ ಕೃಷಿ ಉತ್ಪನ್ನದ 1/6 ಭಾಗದಿಂದ 1/3 ಭಾಗವನ್ನು ಕೆಲವೊಮ್ಮೆ 1/2 ಭಾಗವನ್ನು ಕಂದಾಯವಾಗಿ ಪಡೆಯಲಾಗುತ್ತಿತ್ತು. ಕಂದಾಯವನ್ನು ಧನ–ಧಾನ್ಯರೂಪದಲ್ಲಿ ಸಂಗ್ರಹಿಸಲಾಗುತ್ತಿತ್ತು. ಕಂದಾಯ ಸೋರಿಕೆ, ರೈತ, ಶೋಷಣೆ ಹಾಗೂ ಜಮೀನ್ದಾರರ ದಬ್ಬಾಳಿಕೆಯನ್ನು ನಿಯಂತ್ರಿಸಲು ತಾಲ್ಲೂಕಿಗೆ ಇಬ್ಬರು ಹರಿಕಾರ (ಗೂಢಾಚಾರ)ರನ್ನು ಹೈದರನು ನೇಮಿಸಿದ್ದನು.

ದಿವಾನ್ ಪೂರ್ಣಯ್ಯ ಅವರ ಕಾಲದಲ್ಲಿ ಭೂಕಂದಾಯ ವ್ಯವಸ್ಥೆಯು ಸಾಕಷ್ಟು ಸುಧಾರಿಸಲ್ಪಟ್ಟಿತು. ಪ್ರತಿ ತಾಲ್ಲೂಕಿಗೂ ಒಬ್ಬರು ಅಮಲ್ದಾರರಿರುತ್ತಿದ್ದು, ಅವರ ನೆರವಿಗೆ ಮೂವರು ಸುಭೇದಾರರಿರುತ್ತಿದ್ದರು. ಹೋಬಳಿ ಮಟ್ಟದಲ್ಲಿ ಪಾರುಪತ್ಯೇದಾರರಿದ್ದು, ಅವರ ನೆರವಿಗೆ ಮಣೆಗಾರ ಹಾಗೂ ಗಡಿಶಾನುಭೋಗರು ಇರುತ್ತಿದ್ದರು. ಕಮಿಷನರುಗಳ ಆಡಳಿತಾವಧಿಯಲ್ಲಿ ಭೂಕಂದಾಯ ನಿಗದಿಪಡಿಸಲು ಭೂಸರ್ವೇಕ್ಷಣ ಕಾರ್ಯದ ರೂಪುರೇಷೆಯನ್ನು ರಚಿಸಲಾಯಿತು. ಅದರಂತೆ ಬೌರಿಂಗ್ ಆಡಳಿತದ (ಕ್ರಿ.ಶ.1862–1860)ರ ಕಾಲಕ್ಕೆ ಕೃಷಿ ಭೂಮಿಯನ್ನು ಮೊದಲ ಬಾರಿಗೆ ಅಳೆದು ಸರ್ವೇಕ್ಷಣ ಸಂಖ್ಯೆ ನೀಡುವ ಕಾರ್ಯವು ಕೂಡ ಆರಂಭವಾಯಿತು. ಅನಂತರ ಕ್ರಿ.ಶ. 1877–1878ರಲ್ಲಿ ಮೈಸೂರು ಸಂಸ್ಥಾನದಲ್ಲಿ ವರ್ಗೀಕರಿಸಿ ಕಂದಾಯವನ್ನು ನಿಗದಿಪಡಿಸಲಾಯಿತು. ಇದೆ ಮೊದಲ ಸರ್ವೇಕ್ಷಣದಲ್ಲಿ ಇಡೀ ತಾಲ್ಲೂಕನ್ನೇ ಒಂದು ಘಟಕವನ್ನಾಗಿ ಪರಿಗಣಿಸಿ ಕಂದಾಯವನ್ನು ಸಾರಸಗಟಾಗಿ ನಿಗದಿಪಡಿಸಲಾಗಿತ್ತು. ಆದರೆ ಅನಂತರದಲ್ಲಿ ತಾಲ್ಲೂಕನ್ನು ಪ್ರಾದೇಶಿಕ ಗುಂಪುಗಳಾಗಿ ವರ್ಗೀಕರಿಸಿ ವಿವಿಧ ಅಂಶಗಳನ್ನು ಗಣನೆಗೆತೆಗೆದು ಕೊಂಡು ಹಿಂದಿನ 30 ವರ್ಷಗಳ ವಿವರವನ್ನು ಆಧರಿಸಿ ಕಂದಾಯವನ್ನು ನಿರ್ಧರಿಸಲಾಯಿತು. ಹಾಗೇ ನಿರ್ಧರಿಸಲ್ಪಟ್ಟ ಕಂದಾಯದರವು ಮೈಸೂರು ಒಡೆಯರ ಕಾಲದಲ್ಲಿ ನಡೆದಿರುವುದು ತಿಳಿದುಬರುತ್ತದೆ.

**ಕೊನೆ ಟಿಪ್ಪಣಿಗಳು**

1. ಡಾ.ಪಿ.ಕೆ.ರಾಜಶೇಖರ್ – ಪಿರಿಯಾಪಟ್ಟಣ ತಾಲ್ಲೂಕು ಗ್ಯಾಸೆಟಿಯರ್, ಬೆಂಗಳೂರು, 2010, ಪುಟ.ಸಂ. 179–180.
2. ಎಫಿಗ್ರಾಫಿಯ ಕರ್ನಾಟಕ, ಸಂಪುಟ–4, ಪಿರಿಯಾಪಟ್ಟಣ ತಾಲ್ಲೂಕು ಬೆಟ್ಟದಪುರದಲ್ಲಿರುವ ಶಾಸನಗಳು.

3. ಡಾ.ಆರ್.ಗೋಪಾಲ್ (ಸಂ) – ಮೈಸೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, 2010, ಪುಟ.ಸಂ. 184–185.
4. ಎಫಿಗ್ರಾಫಿಯ ಕರ್ನಾಟಕ, ಸಂಪುಟ–4, ಪಿರಿಯಾಪಟ್ಟಣ ತಾಲ್ಲೂಕು, ಶಾಸನ ಸಂಖ್ಯೆ–1.
5. ಡಾ.ಪಿ.ಕೆ.ರಾಜಶೇಖರ್ – ಪಿರಿಯಾಪಟ್ಟಣ ತಾಲ್ಲೂಕು ಗ್ಯಾಸೆಟಿಯರ್, ಬೆಂಗಳೂರು, 2010, ಪುಟ. ಸಂ.180–181.
6. ಅದೇ, ಪುಟ. ಸಂ.180–182.
7. ಡಾ.ಪಿ.ಕೆ.ರಾಜಶೇಖರ್ (ಸಂ) – ಶಿವಸಂಪದ, ಶ್ರೀರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಮೈಸೂರು, 2001, ಪುಟ. ಸಂ.321–335.